ನಾಗಮಂಗಲ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಯ ಸ್ಥಾಪನೆ

1869(1719) ಶ್ರೀ ಚಲುವರಾಯಸ್ವಾಮಿ. ಎಸ್. (ನಾಗಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕು ಒಣ ಪ್ರದೇಶ ಹಾಗೂ ಅರಣ್ಯ ಭೂಮಿಯ ವ್ಯಾಪ್ತಿ ಇದ್ದು ಬೇಸಿಗೆಯಲ್ಲಿ ಅಗ್ನಿಸ್ಪರ್ಶದಿಂದ ರೈತಾಪಿ ಜನರಿಗೆ ಉಂಟಾಗುವ ತೊಂದರೆಯನ್ನು ನಿವಾರಿಸಲು ಒಂದು ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಸರ್ಕಾರದ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣದಲ್ಲಿ ಅಗ್ನಿ ಅನಾಹುತಗಳ ಸಾಧ್ಯತೆ ಬಹಳಷ್ಟು ಕಡಿಮೆ ಇರುವುದರಿಂದ ಅಗ್ನಿಶಾಮಕ ಠಾಣೆಯನ್ನು ತೆರೆಯುವ ಅವಶ್ಯಕತೆ ಸದ್ಯಕ್ಕೆ ಇರುವುದಿಲ್ಲ.

ರಾಜ್ಯದ ವಿವಿಧ ನಗರದ ಕಾಮಗಾರಿಗಳಿಗಾಗಿ ಹುಡ್ಕೋ ಸಂಸ್ಥೆಯಿಂದ ಪಡೆದ ಹಣ.

1870 (1687) ಶ್ರೀ ಚಂದ್ರಪ್ಪ ಎಂ. (ಭರಮಸಾಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ವಿವಿಧ ನಗರಗಳ ಕಾಮಗಾರಿಗಳಿಗಾಗಿ ಹುಡ್ಕೋ ಸಂಸ್ಥೆಯಿಂದ ಖರ್ಚು ಮಾಡಿರುವ ಹಣ ಎಷ್ಟು; ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ;

ಆ. ಈ ಕಾಮಗಾರಿಗಳನ್ನು ನಿರ್ವಹಿಸಿದ್ದರ ವಿವರ ನೀಡುವುದು;

ಇ. ಈ ಕಾಮಗಾರಿಗಳು ಕಳಪೆ ಗುಣ ಮಟ್ಟದಿಂದ ಕೂಡಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ. ಈ ಕಾಮಗಾರಿಗಳು ಕಳಪೆ ಗುಣ ಮಟ್ಟದಿಂದ ಕೂಡಿದ್ದು, ಈ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಬಾರದೆಂದು ಶಿವಮೊಗ್ಗ ನಗರಸಭೆ ಠರಾವು ಮಾಡಿರುವುದು ಹಾಗೂ ಚಿತ್ರದುರ್ಗದಲ್ಲಿ ಸಾರ್ವಜನಿಕರು ಪ್ರತಿಭಟನೆ ಮೆರವಣಿಗೆ ನಡೆಸಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತೆಗೆದಾರರಿಗೆ ನೀಡುವ ಹಣವನ್ನು ಪೆಂಡಿಂಗ್ ಇಟ್ಟು ಸರ್ಕಾರ ತನಿಖೆ ನಡೆಸಲು ತೀರ್ಮಾನಿಸಿದೆಯೇ;

ಉ. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಈ ಕಾಮಗಾರಿಗಳನ್ನು ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಸ್ತೆ ಕಾಮಗಾರಿಗಳನ್ನು ನಿರ್ವಹಿಸಲು ಈ ಮಂಡಳಿಗೆ ತಿಳಿದಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ. ರಾಜ್ಯದ ವಿವಿಧ ಪಟ್ಟಣ ಪ್ರದೇಶಗಳಲ್ಲಿ ಹಮ್ಮಿಕ್ಕೊಂಡಿರುವ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳಿಗೆ ಕರೆಯಲಾದ ಕಂದಾಯ ವಿಭಾಗ ಮಟ್ಟದ ಪ್ಯಾಕೇಜ್ ಟೆಂಡರ್‌ಗಳ ಗುತ್ತಿಗೆದಾರರಿಗೆ ಸಂದಾಯ ಮಾಡಿರುವ ಮೊತ್ತ ಈ ಕೆಳಕಂಡಂತಿದೆ:

1. ಗುಲ್ಬರ್ಗಾ ಕಂದಾಯ ವಿಭಾಗ ರೂ. 19.45 ಕೋಟಿ
2. ಬೆಳಗಾಂ ಕಂದಾಯ ವಿಭಾಗ ರೂ. 33.53 ಕೋಟಿ